ಸಿ.ಸಿ.ನಂ.8002/2021 ಪಿ.ಡಬ್ಲು-1
*ಪುಷ್ಪಾ ಗಂಡ ರಮೇಶ*

ದಿ.23-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಶ್ರೀ ಎಮ್.ಕೆ ವಕೀಲರಿಂದ:-**

ದಿನಾಂಕ 24-11-2017 ರಂದು ಸಂಗಬಸಪ್ಪ ನಮ್ಮ ಮನೆಗೆ ಬಂದು ಮದುವೆ ಆಗುವ ಬಗ್ಗೆ ತಿಳಿಸಿರುತ್ತಾರೆ. ಆ ಸಮಯದಲ್ಲಿ ನಾನು ಮತ್ತು ನಮ್ಮ ತಂದೆ-ತಾಯಿ ಇದ್ದೇವು. ಆ ದಿನ ರಾತ್ರಿ ಗೊತ್ತಾಗಿದ್ದು ನಾವು ಬೆಳಿಗ್ಗೆ 11-00 ಗಂಟೆಗೆ ಮದುವೆ ನಿಲ್ಲಿಸಲು ಹೋಗಿರುತ್ತೇವೆ. ಮದ್ಯಾಹ್ನ 12-00 ಗಂಟೆಗೆ ಹೋಗಿರುತ್ತೇವೆ. ಬೆಳಿಗ್ಗೆ 6-00 ರಿಂದ 11-00 ವರೆಗೆ ನಾವು ಲಿಂಗಸುಗೂರಿನ ಪೋಲಿಸ್ ಠಾಣೆಗೆ ಬಂದಿದ್ದೇವು ಅವರು ಕೇಸು ತೆಗೆದುಕೊಳ್ಳಲಿಲ್ಲ. ನಾನು, ನಮ್ಮ ತಂದೆ-ತಾಯಿ ಮತ್ತು ಮಾವ ಬಸವರಾಜ, ಸಂಗನಬಸಪ್ಪ ರವರು ಲಿಂಗಸುಗೂರಿಗೆ ಬಂದಿದ್ದೇವು. ಠಾಣೆಯಲ್ಲಿ 10-30 ವರೆಗೆ ಇದ್ದೆವು. ಲಿಮಗಸುಗೂರಿನಿಂದ ನಾವು ಕಾರಿನಲ್ಲಿ ನವಲಿಗೆ ಹೋಗಿರುತ್ತೇವೆ. ಕಾರಿನ ನಂಬರ್ ನನಗೆ ಗೊತ್ತಿಲ್ಲ. ಸದರಿ ಕಾರು ನಮ್ಮ ಮಾವ ಬಸವರಾಜನವರದು. ಶಂಕರಲಿಂಗ ಗುಡಿಯ ಮುಂದೆ ಪೂರ್ವ ದಿಕ್ಕಿಗೆ ಮದುವೆ ಆಗಿರುತ್ತದೆ. ನಾವು ಅಲ್ಲಿ ಹೋದಾಗ ತಾಳಿ ಕಟ್ಟಲು ಅಲ್ಲಿ ಎಲ್ಲಾ ವ್ಯವಸ್ಥೆ ಮಾಡಿದ್ದರು. ನಾವು ಹನುಮಂತಪ್ಪ, ಹೊಳಿಯಮ್ಮ, ಶ್ರೀದೇವಿ, ಅಕ್ಕಮ್ಮ, ಸಿದ್ದಪ್ಪ ಇವರೆಲ್ಲರಗೂ ತಾಳಿ ಕಟ್ಟಬೇಡಿ ಎಂದು ಹೇಳಿದರೂ ಅವರು ತಾಳಿ ಕಟ್ಟಿರುತ್ತಾರೆ. ನಾವು ಸುಮಾರು 5-6 ಜನ ಹೋಗಿದ್ದೇವು. ನಮ್ಮ ಮಾವನವರ ಟಚ್ ಸ್ಕ್ರೀನ್ ಮೊಬೈಲ್ ಇತ್ತಾ ಎಂದರೆ ಇಲ್ಲ. ನಾವು ಪೋಟೋಗ್ರಾಪರನ್ನು ಕರೆದುಕೊಂಡು ಹೋಗಿ ಪೋಟೋ ತೆಗೆಯಲು ಪ್ರಯತ್ನಿಸಿರಲಿಲ್ಲ.

2. ಹುಡುಗ ಮತ್ತು ಹುಡುಗಿಗೆ ಬಟ್ಟೆಗಳನ್ನು ಅಕ್ಕಮ್ಮ ಮತ್ತು ಶ್ರೀದೇವಿ ರವರು ಅಂಗಿ, ಲುಂಗಿ ಸೀರೆ ಜಂಪರ್ ಕೊಟ್ಟು ಉಡಿಸಿಕೊಂಡು ತಾಳಿ ಕಟ್ಟಿಸುವ ಸ್ಥಳಕ್ಕೆ ಕರೆದುಕೊಂಡು ಬಂದಿರುತ್ತಾರೆ. ಹಳದಿ ಸೀರೆ, ಹಸಿರು ಜಂಪರ್ ಇದ್ದವು. ಅವರನ್ನು ಗರ್ಭ ಗುಡಿಯೊಳಗೆ ಕರೆದುಕೊಂಡು ಹೋಗಿರುತ್ತಾರೆ. ಬಟ್ಟೆ ಅಲಂಕಾರ ಮತ್ತು ಮಂಟಪ ಇರಲಿಲ್ಲ. ತಾಳಿಯನ್ನು ಎಲ್ಲಿಂದ ತಂದಿದ್ದರು ಗೊತ್ತಿಲ್ಲ ಆದರೆ ಸಿದ್ದಪ್ಪ ಮತ್ತು ನಿಂಗಮ್ಮಳ ಕೈಯಲ್ಲಿ ತಾಳಿ ಇತ್ತು. ಸದರಿ ಮದುವೆಗೆ ಸುಮಾರು 21 ಜನ ಹಾಜರಿದ್ದರು. ನಾನು ನನ್ನ ಗಂಡ ಮದ್ಯರಾತ್ರಿ 12-00 ಗಂಟೆಗೆ ತಾಳಿ ಕಟ್ಟಿದ್ದಾನೆ ಎಂದು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ನನಗೆ ಪರಿಚಯ ಇರುವ 21 ಜನ ಮಾತ್ರ ಇದ್ದು ಉಳಿದ ಜನರ ಬಗ್ಗೆ ನನಗೆ ಗೊತ್ತಿಲ್ಲ. ಮದುವೆಯಲ್ಲಿ ಊಟಕ್ಕೆ ಲಾಡು, ಅನ್ನ-ಸಾರು ಪಲ್ಲೆ ಮಾಡಿದ್ದರು. ಅಡುಗೆಯನ್ನು ಸದರಿ ಗುಡಿಯ ಮುಂದೆ ಮಾಡಿದ್ದರು. ಸದರಿ ಮದುವೆಗೆ ಪುರೋಹಿತರು ಹಾಜರಿರಲಿಲ್ಲ. ಗಂಡ ಸತ್ತ ಮಹಿಳೆಯನ್ನು ಮದುವೆಯಾಗುತ್ತಿದ್ದರಿಂದ ಯಾರೂ ಬಂದಿರಲಿಲ್ಲ. ಯಲ್ಲಮ್ಮರವರನ್ನು ನಮ್ಮ ಪಕ್ಕದ ಊರಿನ

ಅವರ ಸೋದರ ಮಾವನಿಗೆ ಮದುವೆ ಮಾಡಿ ಕೊಟ್ಟಿದ್ದರು. ನಾನು ಯಲ್ಲಮ್ಮಳನ್ನು ಮದುವೆಯಾದ ಜಾಗದಲ್ಲಿ ನನ್ನ ಗಂಡನನ್ನು ಮದುವೆಯಾಗಬೇಡ ಎಂದು ತಾಕೀತು ಮಾಡಿರುತ್ತೇನೆ. ನಾವು ಸುಮಾರು ಮಧ್ಯಾಹ್ನ 2-00 ರಿಂದ 3-00 ವರೆಗೆ ಸ್ಥಳದಲ್ಲಿ ಇದ್ದೆವು. ನಂತರ ನಾವು ಬಂದ ಗಾಡಿಯಲ್ಲಿ ನಮ್ಮ ಮನೆಗೆ ಹೋಗಿರುತ್ತೇವೆ. ದಿನಾಂಕ 25-11-2017 ರ ಮರುದಿನ ನಾವು ಪೋಲಿಸ್ ಠಾಣೆಗೆ ಹೋಗಿರುವುದಿಲ್ಲ ದೂರು ಕೊಟ್ಟಿರುವುದಿಲ್ಲ. ಈ ಕೇಸನ್ನು 2019 ರಲ್ಲಿ ಹಾಕಿರುತ್ತೇನೆ. 2017 ರಿಂದ 2019 ವರೆಗೆ ನಾವು ಬಡವರಿದ್ದರಿಂದ ಕೇಸನ್ನು ಹಾಕಿರುವುದಿಲ್ಲ. ಆರೋಪಿತನು ಯಾವುದೇ ಯಲ್ಲಮ್ಮನನ್ನಾಗಲೀ ಇನ್ನೀತರ ಯಾವುದೇ ಮಹಿಳೆಯನ್ನು ಮದುವೆ ಆಗಿಲ್ಲ ಎಂದರೆ ಸರಿಯಲ್ಲ. ದಿನಾಂಕ 25-11-2017 ರಂದು ಶಂಕರಲಿಂಗ ದೇವಸ್ಥಾನದಲ್ಲಿ ಆರೋಫಿ ಯಾವುದೇ ಎರಡನೇಯ ಮದುವೆ ಆಗಿಲ್ಲ ಎಂದರೆ ಸರಿಯಲ್ಲ. ಆರೋಪಿತನಿಗೆ ತೊಂದರೆ ಕೊಡುವ ಉದ್ದೇಶದಿಂದ ಆತನ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)
ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಲಿಂಗಸಗೂರು.